

**ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ರೊಬಾಟ್ ಸರ್ಜರಿ ವಿಭಾಗ**

ದ ವಿಂಚಿ. ಅಮೂರ್ತ ಕಲ್ಪನೆಗಳನ್ನೆಲ್ಲ ಸಾಕಾರಕ್ಕಿಳಿಸುವ ಈ ಹೆಸರು ಅದ್ಭುತಕ್ಕೆ ಅನ್ವರ್ಥನಾಮ ಎನ್ನಬಹುದು. ಇದನ್ನು ಕೊನೆಯ ಹೆಸರನ್ನಾಗಿ ಹೊಂದಿದ್ದ ಇಟಲಿಯ ಕಲಾವಿದ ಲಿಯೊನಾರ್ಡೊ ಕಲಾಕೃತಿಗಳು ಈಗಲೂ ಅದ್ಭುತ ಕಲಾಕೃತಿಗಳಾಗಿ ಉನ್ನತ ಸ್ಥಾನದಲ್ಲಿ ನಿಂತಿವೆ. 'ದ ವಿಂಚಿ ಕೋಡ್' ಹೆಸರಿನ ಕಾದಂಬರಿ ಅದೇ ಹೆಸರಿನಲ್ಲಿ ಚಲನಚಿತ್ರವಾಗಿ ಸಂಚಲನ ಮೂಡಿಸಿತ್ತು. ಈಗ ದ ವಿಂಚಿ ಹೆಸರಿನ ರೊಬಾಟ್ ವೈದ್ಯಕೀಯ ಲೋಕದಲ್ಲಿ ತನ್ನ ಕೈಚಳಕ ತೋರಿಸುತ್ತಿದೆ. ವೈದ್ಯರ ಕೈಬೆರಳುಗಳು ತಲುಪದ ಮಾನವನ ಅಂಗಾಂಗಗಳ ಕೊನೆಯ ಪಾಯಿಂಟ್‌ಗೆ ಹೋಗಿ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸುತ್ತಿದೆ ಈ ರೊಬಾಟ್. ಈ ಮೂಲಕ ಮಾನವನ ಬುದ್ಧಿಮತ್ತೆಗೆ ಈ ಕೃತಕ ಬುದ್ಧಿಮತ್ತೆ ಸೆಡ್ಡು ಹೊಡೆಯುತ್ತಿದೆಯೋ ಅಥವಾ ಮನುಷ್ಯ ತನ್ನ ಅಸಾಧಾರಣ ಬೌದ್ಧಿಕಶಕ್ತಿಯನ್ನು ಈ ಯಂತ್ರಮಾನವನ ಮೂಲಕ ಹರಿಯಬಿಡುತ್ತಿದ್ದಾನೋ ಎಂಬ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿದೆ.

ಈ ರೊಬಾಟ್‌ನ ಮಹಿಮೆಯನ್ನು ಅರಿಯಬೇಕಾದರೆ ಇಲ್ಲಿದೆ ಒಂದು ಸಣ್ಣ ಉದಾಹರಣೆ. ಕೇರಳದ ಪಾಲಕ್ಕಾಡ್‌ನ ಎಸ್.ಉನ್ನಿಕೃಷ್ಣನ್ ಪ್ರಕರಣವನ್ನೇ ತೆಗೆದುಕೊಳ್ಳಿ. ಸದ್ಯ ಬೆಂಗಳೂರಿನ ನಿವಾಸಿಯಾಗಿರುವ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಉನ್ನಿಕೃಷ್ಣನ್‌ಗೆ

**ಭಾರತದಲ್ಲಿ 2001ರಲ್ಲಿ ಡಾ.ನರೇಶ್ ತ್ರೆಹಾನ್ ಎಸ್ಕಾರ್ಟ್ ಆಸ್ಪತ್ರೆಯಲ್ಲಿ ಹೃದಯದ ಶಸ್ತ್ರಚಿಕಿತ್ಸೆಗೆ ರೊಬಾಟ್ ಬಳಸಿದರು.**

